Regd No BC 153

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು

5—5—1962

ಸಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

[ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಪಾಕ್‌ನಿಂದ ನೆಹರು ಕೊಲೆ ಯತ್ನ

ಪಾಕಿಸ್ತಾನದ ಪ್ರತಿನಿಧಿ ಸರ್ ಜಫ ರುಲ್ಲಾ ಭಾಷಣಕ್ಕೆ ಭಾರತದ ವಿದೇಶ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನರ್ ರು ಗುರುವಾರ ಭಾಷಣಮಾಡುತ್ತಾ, ಪ್ರಧಾನಿ ಪಂ|| ನೆಹರು ಕೊಲೆಗೆ ಪಾಕಿಸ್ತಾನವು ಮಾಡಿದ ಪ್ರಯತ್ನ ತಿಳಿಸಿದಾಗ ಭದ್ರತಾ ಸಮಿತಿ ಸದಸ್ಯರು ಗಾಬರಿ ಆದಂತೆ ಕಂಡರು. ಪಂ|| ನೆಹರು ಕಲು ವಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಈ ರೀತಿ ಆಯಿತೆಂದು ನುಡಿದರು.

ಇಂದೂರು ರಾಜರ ಉತ್ತರಾಧಿಕಾರಿ

ಸವದೆಹಲಿ 4 — ಇಂದೂರು ಮಹಾರಾಜ ದಿವಂಗತ ಮಹಾರಾಜ ಯಶವಂತ ರಾವ್ ಹೋಳ್ಕರರ ಉತ್ತರಾಧಿಕಾರಿಯಾಗಿ ಅವರ ಪುತ್ರಿ ಉಷಾರಾಜೆಯವರನ್ನು ರಾಷ್ಟ್ರಾಧ್ಯಕ್ಷರು ನೇಮಿಸಿರುವರು : ಇವರಿಗೆ ರಾಜಧನ ರೂ 5 ಲಕ್ಷ ಕೊಡಲಾಗುವುದು.

ಮುಂದಿಗೆ ಗಾಯ

ಕಲ್ಕತ್ತಾ 4— ಡಂಡಂ ವಿಮಾನ ನಿಲ್ದಾಣದಲ್ಲಿ ಐ ಏ ಸಿ ವಿಮಾನಕ್ಕೆ ಬೆಂ ಕಿ ತಗುಲಿ 11 ಮಂದಿ ಗಾಯಗೊಂಡರು.

ಅಶ್ರುವಾಯು ಪ್ರಯೋಗ

ಕರ್ನೂಲು 4— ಪೀಮೆಂಟು ನಗರದಲ್ಲಿ ಮುಷ್ಕರ ನಡೆಸುತ್ತಿರುವ ಫ್ಯಾಕ್ಟರಿ ಕೆಲಸಗಾರರು ರೈಲ್ವೇ ಲೈನಿನಿಂದ ಪೋಲೀಸು ಸ್ಟೇಷನ್ನಿನ ಮೇಲೆ ಕಲ್ಲೆಸೆಯುತ್ತಿದ್ದುದರಿಂದ ಅವರ ಮೇಲೆ ಪೋಲೀಸರು 26 ಅಶ್ರುವಾಯು ಷೆಲ್ಲುಗಳನ್ನು ಉಪಯೋಗಿಸಿದರು — ಈ ಭಾಗದಲ್ಲಿ ಸೆಕ್ಷನ್ 144 ಜಾರಿಯಾಗಿದೆ — 25 ಮಂದಿ ಕೆಲಸಗಾರರು ದಸ್ತಗಿರಿ ಮಾಡಲ್ಪಟ್ಟರು.

ಪತ್ನಿಯನ್ನು ಕರೆತರಲು ಅವಕಾಶವಿಲ್ಲ

ದಕ್ಷಿಣ ಆಫ್ರಿಕಾದಲ್ಲಿ ಜನಿಸಿದ ಭಾರತೀಯನು ಭಾರತೀಯಳಾದ ತನ್ನ ಪತ್ನಿಯನ್ನು ಕರೆದುಕೊಂಡು ಬರಲು ದಕ್ಷಿಣ ಆಫ್ರಿಕಾ ಸರ್ಕಾರ ಅನುಮತಿ ಕೊಡಲಿಲ್ಲವೆಂದು ಜೊಹಾನ್ಸ್‌ಬರ್ಗಿನ ವಾರ್ತೆ ತಿಳಿಸುತ್ತದೆ ಗಂಡನ ತಂದೆ ಶ್ರೀ ನಾನುಭಾಯಿ ದೇಸಾಯರು ಭಾರತದ ವಿದೇಶ ಮಂತ್ರಿ ಶ್ರೀ ವಿ. ಕೆ. ಕೃಷ್ಣಮೆನರ್‌ರಿಗೆ ಪತ್ರ ಬರೆದು, ಭಾರತದವರಿಗೆ ದಕ್ಷಿಣ ಆಫ್ರಿಕಾದಲ್ಲಿ ದೊರೆಯುತ್ತಿರುವ ವರ್ತನೆ ಬಗ್ಗೆ ಚರ್ಚೆ ನಡೆಯುತ್ತಿರುವ ಸಮಯದಲ್ಲಿ ಈ ವಿಚಾರವನ್ನು ಗಮನಕ್ಕೆ ತಂದೇಳು ಎಂದು ಸೂಚಿಸಿರುವರು

೦೦೦

ಬಜಂತ. ಎಲ್ಲೋರ ಮತ್ತಿತರ ಕ್ಷೇತ್ರಗಳಲ್ಲಿರುವ ಪ್ರಾಚೀನ ವರ್ಣ ಚಿತ್ರಗಳ ಸಂರಕ್ಷಣೆಗಾಗಿ ರಾಷ್ಟ್ರಾಯನಿಕ ವಸ್ತುಗಳ ಖರೀದಿಗೆಂದು ಹಣ ವೆಚ್ಚ ಮಾಡಿರುವುದಾಗಿ ಅಪ್ರಮಾಣಿಕ ರೀತಿಯಲ್ಲಿ ರೂ. 4340 ಹಣವನ್ನು ದುರುಪಯೋಗಪಡಿಸಿಕೊಂಡ ಆಪಾದನೆಯ ಮೇಲೆ ಹೈದರಾಬಾದಿನಲ್ಲಿರುವ ಅಸಿಸ್ಟೆಂಟ್ ಆರ್ಕಿಯಲಾಜಿಕಲ್ ಕೆಮಿಸ್ಟ್ (ಮೊದಲನೆಯ ದರ್ಜೆ ಅಧಿಕಾರಿ) ಆದ ಡಾ|| ಎಸ್. ಪರಮಶಿವ ಎಂಬುವರಿಗೆ ಆರು ತಿಂಗಳ ಶಿಕ್ಷೆಯನ್ನು ವಿಧಿಸಲಾಗಿದೆ.

ಭಾರತದ ವಿರುದ್ಧ ಆರೋಪ ಆಧಾರವಿಲ್ಲದ್ದು

ಕಾಶ್ಮೀರದ ಬಗ್ಗೆ ಭದ್ರತಾ ಸಮಿತಿ ಯಲ್ಲಿ ಇಷ್ಟದ ಪ್ರತಿನಿಧಿ ಫ್ಲಟೋ ಮೊರೊಜೋವ್ ಭಾಷಣ ಮಾಡುತ್ತಾ, ಕಾಶ್ಮೀರ ಸರ್ವ ಸೈನ್ಯ ಮೇಲೆ ಭಾರತ ಶಾಂತಿಗೆ ಭಂಗ ತರುವ ಭೀತಿ ಮಾಡುತ್ತಿದೆ ಎಂಬ ಆರೋಪವನ್ನು ಪಾಕಿಸ್ತಾನ ಮಾಡಿರುವುದಕ್ಕೆ ಆಧಾರವಿಲ್ಲ ಎಂದರು ಕಾಶ್ಮೀರದ ಮೂರನೆಯೊಂದು ಭಾಗ ಪ್ರದೇಶ ಪಾಕಿಸ್ತಾನದ ವಶದಲ್ಲಿರುವುದು ಎಂದು ಅವರು ತಿಳಿಸಿದರು ಕಾಶ್ಮೀರ ಪ್ರಶ್ನೆ ಮತ್ತೆ ಕುದಿಯ ತೊಡಗಿದರೆ ಅದು ಕಾಶ್ಮೀರ ಪ್ರದೇಶಕ್ಕೆ ಮಾತ್ರ ಅನ್ವಯಿಸುವುದಿಲ್ಲ ಎಂದು ತಿಳಿಸಿರುವರು. ಅವರ ಪ್ರತಿಯೊಂದು ಪದದಲ್ಲೂ ಬೆದರಿಕೆ ಇದೆ ಎಂಬುದಾಗಿ ಇಷ್ಟದ ಪ್ರತಿನಿಧಿ ತಿಳಿಸಿದರು.

ಮೃತ್ಯುವಿನಿಂದ ಪಾರು

ಪ್ಯಾರಿಸ್ 3 — ಪ್ಯಾರಿಸ್ಸಿನಲ್ಲಿ ನಡೆಯುವ ಫೈಂಚ್ ಕಿರೀಟಗಳಲ್ಲಿನ ವಜ್ರ ಪ್ರದರ್ಶನಕ್ಕೆ ವಾಷಿಂಗ್ಟನ್ನಿನಿಂದ ಹೊರಟ ವಜ್ರವನ್ನು ತಂದ ವಿಮಾನವು ಬೋಸ್ಟನ್ನಿನಲ್ಲಿ ವಿಮಾನಕ್ಕಂಟಿದ ತೊಂದರೆಗಾಗಿ ಇಳಿದು, ವಜ್ರವೂ ಪ್ರಯಾಣಿಕರೂ ಬೇರೆ ವಿಮಾನದಲ್ಲಿ ಬಂದರು..... ಹಿಂದಿನ ಈ ವಜ್ರದ ಮಾಲೀಕರು ಭಯಂಕರ ಮೃತ್ಯು ಪಾಲಾದರು

★

ಅಲ್ಜೀರಿಯಾದಲ್ಲಿ ನಿನ್ನೆ ಹಗಲು ಹೊತ್ತಿನಲ್ಲೇ ಕರ್ಫ್ಯೂ ವಿಧಿಸಲ್ಪಟ್ಟಿತು.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಕ್ಕ ಕೃಷ್ಣ ಜೋಯಿಸರಿಂದ

ದ್ವಿತೀಯ ತೃತೀಯ ರೋಹಿಣಿ

ವಿವಿಧ ವಿಷಯಗಳು

ಕಾಶ್ಮೀರ ಭಾರತ ರಾಜ್ಯಕ್ಕೆ ಸೇರಿರುವಂತೆ ಸೇರಿರುವ ಯಾವ ರಾಜ್ಯವೂ ಭಾರತವನ್ನು ಬಿಡುವಂತಿಲ್ಲವೆಂದು ಶ್ರೀ ವಿ ಕೆ ಕೃಷ್ಣಮೆನರ್ ಮೊನ್ನೆ ಭದ್ರತಾ ಸಮಿತಿಯಲ್ಲಿ ತಿಳಿಸಿದರು. ಮತಸಂಗ್ರಹ ನಡೆಯಬೇಕೆಂದರೆ ಇಡೀ ದೇಶದಲ್ಲಿ ನಡೆಯಬೇಕು. ಅದು ಭಾಗವೊಂದರಲ್ಲಿ ಮಾತ್ರವಲ್ಲ ಎಂದು ಅವರು ನುಡಿದರು.

ಕಾಶ್ಮೀರದ ಬಗ್ಗೆ ಭಾರತ ಪಾಕಿಸ್ತಾನಗಳ ಕಲಹ ತೀರ್ಮಾನವಾಗುವವರೆಗೆ ಗಡಿ ಬಗ್ಗೆ ಚೀನಾ ಪಾಕಿಸ್ತಾನ ಒಡಂಬಡಿಕೆಯನ್ನು ಹಂಗಾಮಿಯಾಗಿ ಮಾಡಿಕೊಳ್ಳಲು ನಿರ್ಧರಿಸಿದೆ ಎಂದು ಪಾಕಿಸ್ತಾನ ವಿದೇಶ ಇಲಾಖೆ ಪ್ರಕಟಿಸಿದೆ ಎಂದು ತಿಳಿಸಿರುವರು.

ಶಾಂತಿ ಸಾಗರದ ಅಣು ಪ್ರಯೋಗ ಪರೀಕ್ಷೆಯ ಪ್ರದೇಶಕ್ಕೆ 89 ವರ್ಷದ ಬ್ರಿಟಿಷ ದಾರ್ಶನಿಕ ಬರ್ಟ್ರಾಂಡ್ ರಸೆಲ್ಲರು ಹಡಗು ಕಳಿಸುವಂತೆ ಮಾಡಿದ ಬೇಡಿಕೆಯನ್ನು ಯುಕ್ತಿಗಾಸಿಸ್ಟ್ರೇಲಿಯಾದ ಪ್ರಧಾನಿ ಟ್ರೀಟೋಂಬರು ನಿರಾಕರಿಸಿರುವರು.

ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಸೇರಿ 6 ಜನ ಜಾಗಲ್ಕೋಟೆ ಕ್ಷೇತ್ರದಿಂದ ವೈಶೂರು ವಿಧಾನ ಸಭೆಗೆ ಅರ್ಜಿ ಸಲ್ಲಿಸಿರುವರು. ಉಮೇದುವಾರಿಕೆ ಅರ್ಜಿ ವಾಪಸು ಪಡೆಯಲು ಈ ಮಾಹೆ 7 ನೇ ತಾ|| ಕಡೆ ದಿನ.

ಕಳೆದ ಬುಧವಾರ ಭದ್ರತಾ ಸಮಿತಿಯಲ್ಲಿ ಪಾಕಿಸ್ತಾನ ನಿಯೋಗ ನಾಯಕ ಸರ್ ಜಫ್ರುಲ್ಲ ಖಾನರು ನಾಲ್ಕು ಗಂಟೆ ವೇಳೆ ಮಾಡಿದ ಭಾಷಣವನ್ನು ನ್ಯೂಯಾರ್ಕ್ ಟೈಮ್ಸ್ ಇನ್ನೂರು ಪದಗಳಲ್ಲಿ ಪ್ರಕಟಿಸಿದೆ

॥ ಶುಭಮಸ್ತು ॥

— ಶ್ರೀ-ವಿದ್ಯಾಶಂಕರೋ ವಿಜಯತೇ —

ಶ್ರೀ ಪ್ಲವನಾಮ ಸಂವತ್ಸರದ ಪುಷ್ಯ ಶುಕ್ಲ ೧೪ (19-1-62)

ಶುಕ್ರವಾರ ಶುಭ ಮುಹೂರ್ತದಲ್ಲಿ ಶ್ರೀ ಜಗದ್ಗುರು ಶೃಂಗಗಿರಿ ಪೀಠಸ್ಥರಾಗಿ

ಬೆರೆಯುತ್ತಿರುವ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರಿಗೆ

ಶ್ರೀಮದಭಿನವ ಶಂಕರಾಲಯದಲ್ಲಿ ಪೌರರು ವಿನಯ ಭಕ್ತಿಪೂರ್ವಕ

ಬಿನ್ನವತ್ತಳೆಯನ್ನು ಅರ್ಪಿಸುವ ಸಂದರ್ಭದಲ್ಲಿ ರಚಿಸಿ ಹಾಡಿದ

ಸ್ವಾಗತ ಪದ್ಯ ದಿವ್ಯ ನವರತ್ನ ಮಾಲಿಕೆ

॥ ಭಾವಿನಿ ಷಟ್ಪದಿ ॥

ಶ್ರೀಮದನುಪಮ ರತ್ನಗರ್ಭ
ಸ್ವಾಮಿ ಗಣಪತಿ, ಚಂದ್ರಮೌಳೀ
ನಾಮಶಂಕರ, ಕಂಬದಿಂ ಹೊರಬಂದ ನರಸಿಂಹ ॥
ಶಾಮಲಾಂಬೆಯ ಶಾರದಾಂಬೆಯು
ಶಾಮಿತಾರ್ಥವನಿತ್ತು ರಕ್ಷಿಪ
ಈ ಮಹಿಯ ಜನಗಳನು ದೀರ್ಘಾಯುಷ್ಯ ಸೊಂಪದಿದೆ ॥ ೧ ॥

ಪಂಪಮಹಾಸ ಕಲಾನಿಧಿಯು ಕುಜ
ಹಿತನ ಬುಧನುಶ ಗುರುವರೇಣ್ಯನ
ಸೋಪಕವಿ ವಂದಿತನ ಮಂದಸ್ಮಿತನ ಪಾದಿಪನ ॥
ಅಂಗಗಳ ಸಂಕುಲಕೆ ಗಂಡನ
ಧಂಗೆ ಗುರುವೆಂದೆನುವ ಕೇತುಪ
ಧರಿಸಿ ಮೆರೆದಾದಿತ್ಯ ಶಂಕರಗುರುಗೆ ಜಯಜಯಶು ॥ ೨ ॥

ಶೃಂಗಗಿರಿ ಜಗದೊಳಗೆ ತಾನು
ತ್ತುಂಗ ಗುರುವಂಪೀಠವಾಗುತ
ಭಂಗವಿಲ್ಲದ ಘನತಪೋನುಷ್ಠಾನ ಮಹಿಮೆಯೊಳು ॥
ತಿಂಗಳಿನ ಕಳೆಯಂತೆ ಮೋಡಶ
ಪುಂಗ ಕಳೆಯಿಂ ಮೆರೆದು ಒಹುಪರಿ
ಮಂಗಳಕೆ ಮಂಗಳವು ಕಾನನಾಯತ್ತಮಮಸದೃಶದೆ ॥ ೩ ॥

ಪಿಂಡಿ ಸೊಗಸಿದ ಪೇಶ್ವೆಮೊದಲಿನೆ
ಬಂಧುರದ ರಾಜಾಧಿರಾಜರು
ಚಂದದಮೆನೆ ಸುಲ್ತಾನ ಷಾಹಿಗಳರಿತುಮನದಿಂದ ॥
ನಿಂದು ಶಠಗಳನೆಸಿ, ಪುಗಿಯುತ
ಮುಂದಿವೊಗಳುವ ಶೇದೊಳುದ್ಭುತ
ಹಿಂದಹಾಸದೆ ಮಾನ್ಯ ವಂಶಮನಾಳ್ದಿದೆ ನಡೆಸಿದರು ॥ ೪ ॥

ಯಾದುನೃಪಾಲಂಪಾಳಿ ಮುಮ್ಮಡಿ
ಚದುರ ಜಾಮವ ಹೀಶ ನಾಲ್ವಡಿ
ಪದಯ ಕೃಷ್ಣಕ್ಷಿತಿಪ ಜಯಚಾಮೇಂದ್ರ ನೃಪವರಣಿಯು ॥
ಪಾದಿಸ ಮಂತ್ರಿದೆಗಳನೀಯುತ
ಮೈದಲ ಪಾದವ ಭಜಿಸಿ ಸಜ್ಜರು
ಹೃದಯ ಪಂಕಜ ಪುಲ್ಲವಾಗಿಸಿ ಕೀರ್ತಿಪಡೆದಿಹರು ॥ ೫ ॥

ತಿಳಿಯೆ ಪೀಠದೊಳುಗ್ರಭಾರತಿ
ಕಳಿಯುಳಿಸುವ ಸಿಂಹಭಾರತಿ
ವಿಲಸುಪಾಪರು ಚಂದ್ರಶೇಖರಭಾರತೀಶ್ವರರು ॥
ಸುಳಿದು ಭಾರತ ಭವ್ಯಭೂಮಿಯು
ಭಣಿಸೆ ಭಾಪುರೆಯೆಂಬ ಕೀರ್ತಿಯು
ಕಣಿವ ಕೋಳಾಹಳದೆ ಶಂಬಿದರೆನಲುಪೇತೇನು ॥ ೬ ॥

ಅವರ ಶಂಕರಜಾತ ಜಾತರ
ಭವಳಕೀರ್ತಿ ವಿಶಾಂದಂ ಗುರು
ನಿವಹನೊದಲಿಗರಾದ ವಿದ್ಯಾತೀರ್ಥಂಭಿನವರ ॥
ಭುವನ ಗುಂಗಳ ಪೊಗಳೆ ಸಾಧ್ಯವೆ
ಕವಸ ಮುಖದೊಳು ತಪದೊಳದ್ಭುತ
ಭವನಂನು ಸುಸ್ವಾಗತದೆ ಬೇಡುವೆ ಭಕ್ತಿಯೊಳು ॥ ೭ ॥

ವಿಜಯಮಾಡಿಸಬೇಕು ಗುರುಗಳೆ
ಸುಜಯಮೆನೆ ವೈಸೂರು ನಗರಕೆ
ರುಜೆಯೋಗಿಸಬೇಕು ಪದತಲಭೂವಿಯಿಂ ನಮಗೆ ॥
ಭಜಿಸುವಂ ಘನ ಕಲ್ಪವೃಕ್ಷ
ವ್ರಜದ ಪರಿನಂಬಿಹೆವು ನಿರುತವು
ನಿಜದ ನಿಮ್ಮಪದೇಶವಾಣಿಯುನಿತ್ತು ರಕ್ಷಿಪುದು ॥ ೮ ॥

ಮಂಗಳಂವರ ರತ್ನಗರ್ಭಗೆ
ಮಂಗಳಂ ಸರಿ ಚಂದ್ರಮೌಳಿಗೆ
ಮಂಗಳಂ ನರಹರಿಗೆ ಮಾತ್ಯಾವಂದಿಶಾಂಡಿಗೆ ॥
ಮಂಗಳಂ ಸರಿತೀರ್ಥ ಪಾದಕೆ
ಮಂಗಳಂ ಭೂಪತಿಗೆ ಸಭೆಗುರಿ
ಮಂಗಳಂ ಕವಿ ಭಾರತೀಂದ್ರನ ಕವನಕುಸುಮಕ್ಕೆ ॥ ೯ ॥

ರಚಿಸಿದವರು— ಆಶುಕವಿರತ್ನಂ ವಿದ್ವಾನ್
ಜಿ ಆರ್. ವೆಂಕಟಸುಬ್ಬಶಾಸ್ತ್ರಿ ಭಾರತೀ
ಪಂಡಿತ್, ಶಾರದಾವಿಲಾಸ ಪ್ರೌಢಶಾಲಾ, ಮೈಸೂರು

Help The 'Gorakshana'

" ಗೋರಕ್ಷಣ " ಪತ್ರಿಕೆಗೆ ಜೊಂಬಲಿಗರಾಗಿರಿ

ಗೋರಕ್ಷಣೆ, ಪಶುಪಾಲನೆಯ, ಪಶುವೈದ್ಯ, ಶಾಕಾಹಾರ ವಿಚಾರಗಳಂದ ಕೂಡಿದ

ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಪ್ರದವಾಗಿ ಮತ್ತು ಪ್ರಕಟಿಸಲು ಅನುಕೂಲವಾದ

ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

ವುಡ್‌ಲ್ಯಾಂಡ್ಸ್ ಮಹಿಮಾನ್ವಿತ 13 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 3 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press, Chamarajapuram, Mysore 4.